ಇ) ಈ ವಿಭಾಗದಲ್ಲಿ ಬಾವಿಯ ಮತ್ತು ಕೊಳವೆ ಬಾವಿಗಳಲ್ಲಿ ಉಪ್ಪು ನೀರು ಸಿಗುವುದರಿಂದ ಬೇರೆ ಕಡೆಯಿಂದ ನೀರು ಸರಬರಾಜು ಮಾಡುವ ಯೋಜನೆ ಇದೆಯೇ?

ಈ ಪಡುಬಿದ್ರಿಯ ಉಷ್ಣ ವಿದ್ಯುತ್ ಸ್ಥಾವರಕ್ಕೆ ಮುಲ್ಕಿ ಆಣೆಕಟ್ಟನ್ನು ರಚಿಸುತ್ತಿದ್ದು ಇಲ್ಲಿ ನೀರು ಹೆಚ್ಚಿಗೆ ಸಂಗ್ರಹವಾಗುವ ಕಾರಣ ಆ ನೀರನ್ನು ಮುಲ್ಕಿ ಪುರಸಭೆಗೆ ಕೊಡಬೇಕೆಂದು ವಿನಂತಿಸಿಕೊಂಡಿರುವುದರಿಂದ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಕೆ. ಜೆ ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):–

ಅ) ಹೌದು

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರಸ್ತುತಕ್ಕೆ ಈ ರೀತಿಯ ಪ್ರಸ್ತಾವನೆ ಇರುವುದಿಲ್ಲ.

ಈ) ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ದೋಣಿ ದುರಂತದ ಮೀನುಗಾರರಿಗೆ ಪರಿಹಾರ ನೀಡುವ ಬಗ್ಗೆ

460 ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಬಾರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ ತೆರಳಿದ ದೋಣಿಗಳಲ್ಲಿ ಎಷ್ಟು ದೋಣಿಗಳು ಅಪಘಾತಕ್ಕೆ ಶುತ್ತಾಗಿವೆ?

ಆ) ಎಷ್ಟು ಮಂದಿ ತಮ್ಮ ಪ್ರಾಣ ಕಳೆದು ಕೊಂಡಿರುವರು. ಅದರಿಂದ ಅವರಿಗಾಗಿರುವ ನಷ್ಟವೆಷ್ಟು?

ಇ) ಇವರಿಗೆ ಈ ತನಕ ಏನು ಪರಿಹಾರ ನೀಡಲಾಗಿದೆ; ಅವರಿಗೆ ಭರವಸೆ ನೀಡಿದ ಸಹಾಯವನ್ನು ಯಾವಾಗ ಪೂರ್ತಿ ಕೊಡಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):–

ಅ) ನಾಲ್ಕು ದೋಣಿಗಳು ಅಪಘಾತಕ್ಕೆ ಶುತ್ತಾಗಿವೆ.

ಆ) 19 ಜನ ಮೀನುಗಾರರು ಪ್ರಾಣ ಕಳೆದುಕೊಂಡಿರುತ್ತಾರೆ ಮತ್ತು ಸುಮಾರು ರೂ. 15.00 ಲಕ್ಷ ಆಸ್ತಿ ನಷ್ಟ ಸಂಭವಿಸಿರುತ್ತದೆ.

ಇ) ದಿನಾಂಕ 5–9–1990 ರಂದು ಮಂಗಳೂರಿನ ಅಳಿವೆಯಲ್ಲಿ ಸಂಭವಿಸಿದ ಎರಡು ದೋಣಿ ದುರಂತಗಳಲ್ಲಿ ಪ್ರಾಣ ಕಳೆದುಕೊಂಡ ಹತ್ತು ಜನ ಮೀನುಗಾರರ ವಾರಸುದಾರರಿಗೆ ತಲಾ ರೂ. 12,000–00 ಗಳನ್ನು ಪರಿಹಾರವಾಗಿ ನೀಡಲಾಗಿದೆ. ಇನ್ನುಳಿದ ಎರಡು ದೋಣಿ ದುರಂತಗಳಲ್ಲಿ ಮತ್ತು ಮೀನುಗಾರಿಕೆ ಮಾಡುವಾಗ ಆಕಸ್ಮಿಕವಾಗಿ ಪ್ರಾಣ ಕಳೆದುಕೊಂಡ ಒಂಬತ್ತು ಜನ ಮೀನುಗಾರರ ವಾರಸುದಾರರಿಗೆ ಸಾಮೂಹಿಕ ವಿಮಾ ಯೋಜನೆಯಲ್ಲಿ ಮತ್ತು ಇತರೇ ಯೋಜನೆಗಳಲ್ಲಿ ಪರಿಹಾರ ನೀಡಲು ಕ್ರಮಕೈಗೊಳ್ಳಲಾಗಿದೆ.

ಧಾರವಾಡ ಜಿಲ್ಲಾ ಪರಿಷತ್ತಿನ ರಸ್ತೆಗಳ ದುರಸ್ತಿ ಬಗ್ಗೆ

53ಎ. ಶ್ರೀ ಕೆ. ಹೆಚ್. ಕುರಡಗಿ (ಮುಂಡರಗಿ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಪರಿಷತ್ತಿನ ಕಕ್ಷೆಯಲ್ಲಿ ಬರುವ ರಸ್ತೆಗಳು ಪೂರ್ಣ ನಾದುರಸ್ತಿ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ, ಸರ್ಕಾರದವರು ದುರಸ್ತಿ ಕ್ರಮದ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):–

ಅ) ಧಾರವಾಡ ಜಿಲ್ಲಾ ಪರಿಷತ್ತಿನ ಕಕ್ಷೆಯಲ್ಲಿ ಬರುವ ಎಲ್ಲಾ ರಸ್ತೆಗಳು ಪೂರ್ಣ ಕೆಟ್ಟಿರುವುದಿಲ್ಲ. ಲಭ್ಯ ಮಾಡಿರುವ ನಿರ್ವಹಣಾ ಅನುದಾನದಲ್ಲಿ ರಸ್ತೆಗಳನ್ನು ದುರಸ್ತಿಯಲ್ಲಿಡುವಂತೆ ಧಾರವಾಡ ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗಿದೆ.